ಅಂತ ಕೇಳ್ತಿದೆ. ನನಗೆ ಸಾಯುವುದಕ್ಕೆ ಇಷ್ಟವಿಲ್ಲ ಕಣೋ, ನನ್ನದು ಸಾಯುವ ವಯಸ್ಸೇನೋ? ಶಿವಾನೀನ್ನ ಬಿಟ್ಟು ನಾನು ಹೇಗೋ ಹೋಗಲಿ?"

ಸೂರ್ಯನಿಗೆ ದುಃಖ ಉಮ್ಮಳಿಸಿತು.

"ಸೂರ್ಯ ನೀನು ನನಗೊಂದು ಮಾತು ಕೊಡ್ತಿಯಾ?"

"ಹೇಳು ಸುಮೇರು, ನಾನೇನು ಮಾಡಬೇಕು?"

"ಸೂರ್ಯ ನಾನು ಸತ್ತುಹೋದಮೇಲೆ ಶಿವಾನಿ ವಿಧವೆಯಾಗ್ತಾಳೆ. ಅವಳಿಗೊಂದು ಬಾಳುಕೊಡು..."

"ಏನೋ ನಿನ್ನ ಮಾತಿನ ಅರ್ಥ?"

"ನೀನು ಶಿವಾನಿಯನ್ನು ಮದುವೆಯಾಗು..."

"ಹೋದವಾರ ನಾನು ನಿನಗೆ ರಚನಾ ವಿಚಾರ ಹೇಳಿದ್ದೆನಲ್ವಾ?"

"ರಚನಾನ್ನ ಯಾರಾದ್ರೂ ಮದುವೆಯಾಗ್ತಾರೆ. ಅವಳ ಮದುವೆಗೆ ಸಹಾಯ ಮಾಡುವುದಕ್ಕೆ ನಾನು ಅಪ್ಪಅಮ್ಮಂಗೆ ಹೇಳ್ತೀನಿ. ಆದರೆ ಶಿವಾನಿ ವಿಧವೆಯಾಗುವವಳು. ವಿಧವೆಯರಿಗೆ ಮದುವೆಯಾಗೋದು ತುಂಬಾ ಕಷ್ಟ. ಅವಳನ್ನು ಮದುವೆಯಾಗುವವನು ಅವಳ ಆಸ್ತಿಸಂಪತ್ತು ಕೆಲಸ ನೋಡಿ ಮದುವೆಯಾಗಬಾರದು. ಅವನು ಅವಳನ್ನು ತುಂಬಾ... ಪ್ರೀತಿಸಬೇಕು. ನನ್ನ ಅಗಲಿಕೆಯ ನೋವನ್ನು ಅವನು ಮರೆಸಬೇಕು. ಅದು ನಿನ್ನಿಂದ ಮಾತ್ರ ಸಾಧ್ಯ. ದಯವಿಟ್ಟು ಮಾತು ಕೊಡೋ" ಅವನು ಅಂಗಲಾಚಿದ್ದ.

ಅವರ ಮಾತುಕತೆಗೆ ಸಾಕ್ಷಿಯಾಗಿದ್ದ ಬಾಲು ಸುಮೇರು ಕಡೆ ನೋಡಿದ. ಅವನು ಸೂರ್ಯನ ಕೈಹಿಡಿದು ಬೇಡುವ ದೃಶ್ಯ ನೋಡಿ ಅವನೆದೆಗೆ ಬೆಂಕಿಬಿದ್ದಂತಾಯಿತು.

"ಮಾತು ಕೊಡು ಸೂರ್ಯ. ಸಾಯುವವರ ಕೊನೆಯ ಆಸೆ ನೆರವೇರಿಸುವುದು ನಮ್ಮ ಕರ್ತವ್ಯ... ಸುಮೇರು, ಸೂರ್ಯ ಮಾತುಕೊಡ್ತಿದ್ದಾನೆ. ಶಿವಾನಿ ಒಪ್ಪುವುದಾದರೆ ಖಂಡಿತಾ ಅವನು ಮದುವೆಯಾಗ್ತಾನೆ ಯೋಚಿಸಬೇಡ. ಸೂರ್ಯ ನೀನೇ ಒಂದು ಸಲ ಹೇಳು..." ಎಂದ ಬಾಲು.

"ಸುಮೇರು, ಶಿವಾನಿ ಒಪ್ಪುವುದಾದರೆ ನಾನು ಖಂಡಿತಾ ಅವಳನ್ನು ಮದುವೆಯಾಗ್ತೀನಿ" ಗೆಳೆಯನ ಕೈಹಿಡಿದು ಹೇಳಿದ ಸೂರ್ಯ.

ವಾರದಲ್ಲಿ ಸುಮೇರು ಎಲ್ಲರನ್ನೂ ಬಿಟ್ಟು ಹೊರಟುಹೋಗಿದ್ದ. ಅವನ ಅಂತಿಮ ದರ್ಶನಕ್ಕೆ ಹೋದಾಗ ಶಿವಾನಿ ಗರಬಡಿದವಳಂತೆ ಕುರ್ಚಿಯಲ್ಲಿ ಕುಳಿತಿದ್ದಳು. ಅವಳ ಕಣ್ಣಿನಲ್ಲಿ ಒಂದು ಹನಿ ನೀರು ಇರಲಿಲ್ಲ.

"ಅವಳಿಗೆ ಶಾಕ್ ಆಗಿದೆ. ಅದಕ್ಕೆ ಅವಳು ಅಳ್ತಿಲ್ಲ. ದುಃಖ ತಡೆಯಬೇಡ, ಶಿವಾನಿ ಅತ್ತುಬಿಡು" ಎಂದು ಶಿವಾನಿಯ ಅಮ್ಮ ಹೇಳುತ್ತಲೇ ಇದ್ದರೂ ಕಲ್ಲಿನಂತೆ ಕುಳಿತಿದ್ದಳು ಶಿವಾನಿ. ಸುಮೇರುವಿನ ತಂದೆತಾಯಿ ಸ್ಥಿತಿ ಹೇಳುವಂತಿರಲಿಲ್ಲ.

ಸೂರ್ಯ ಹೊರಟಾಗ ಬಾಲು ಹೇಳಿದ, "ನಾನು ಇದೇ ಮನೆಯಲ್ಲಿರ್ತೀನಿ. ನಮ್ಮ ತಂದೆ ಈ ತಿಂಗಳು ರಿಟೈರ್ ಆಗ್ತಾರೆ. ಆಮೇಲೆ ಮೈಸೂರಲ್ಲಿ ಮನೆ ಮಾಡ್ತಾರೆ. ನೀನು ಆಗಾಗ್ಗೆ ಬರ್ತಿರು. ಸುಮೇರು ತಂದೆತಾಯಿಗೆ ಕೊಂಚವಾದರೂ ಸಮಾಧಾನ ಸಿಗುತ್ತೆ."

"ಆಗಲಿ ಕಣೋ. ನೀನು ಇಲ್ಲಿರೋದ್ರಿಂದ ನನಗೂ ಸಮಾಧಾನ" ಎಂದ ಸೂರ್ಯ.

ಮೈಸೂರಿನಿಂದ ಬಂದಮೇಲೆ ಸೂರ್ಯ ಯೋಚನೆಯಲ್ಲಿ ಮುಳುಗಿದ. ತಾನು